'ಎಮ್ ಸ್ಯಾಂಡ್ ಅಂತಾ ಬಂದಿದೆಯಲ್ಲಾ ಈಗ, ಅದನ್ನು ಬಳಸಬಹುದಾ?'

'ಗೋಡೆಗೆ ಇಟ್ಟಿಗೆ ಒಳ್ಳೇದೋ, ಅಥವಾ ಹಾಲೋ ಬ್ಲಾಕೋ?',

'ಕಾಲಂ ಹಾಕಿ ಕಟ್ಟಿದರೆ ಮಾತ್ರ ಮನೆ ಮಜಬೂತಾಗಿರೋದಲ್ವಾ?'

ಹೀಗೆ ಹತ್ತು ಹಲವಾರು ಪ್ರಶ್ನೆಗಳು ಮನೆ ಕಟ್ಟುವವರ ಮನದಲ್ಲಿ ಮೂಡುತ್ತಲೇ ಇರುತ್ತವೆ. ಒಬ್ಬೊಬ್ಬರು ಒಂದೊಂದು ರೀತಿ ಉತ್ತರಿಸುತ್ತಾರೆ. ಗೊಂದಲ ಮುಂದುವರಿಯುತ್ತದೆ. ಮೆಟೀರಿಯಲ್ಲುಗಳ ಹೊಂದಾಣಿಕೆ, ಮೇಸ್ತ್ರಿಯೊಡನೆ ಪರದಾಟ, ಕಾಂಟ್ರಾಕ್ಟರುಗಳ ಗೋಳು, ಕೂಲಿಗಳ ಕೊರತೆ... ಈ ಎಲ್ಲದರ ಜೊತೆ ಕಟ್ಟಡದ ಗುಣಮಟ್ಟ. ಹಳ್ಳಿಯಾಗಲೀ ನಗರವಾಗಲೀ ಈ ಎಲ್ಲ ಸಮಸ್ಯೆಗಳು ಅದರದೇ ರೀತಿಯಲ್ಲಿ ಎಡತಾಕುತ್ತವೆ. ಒಂದು ರೀತಿ ಇವತ್ತಿನ ಆಧುನಿಕ ಯುಗದಲ್ಲೂ 'ಮನೆ ಕಟ್ಟಿ ನೋಡು' ಎನ್ನುವ ಹಳೆಯ ಮಾತೊಂದು ತಕ್ಕಮಟ್ಟಿಗೆ ಪ್ರಸ್ತುತವಾಗಿಯೇ ಇದೆ. ಅದಕ್ಕೇ ಎಷ್ಟೋ ಜನ ಈ ಮನೆ ಕಟ್ಟುವ ಸಹವಾಸವೇ ಬೇಡ ಎಂದು ಅಪಾರ್ಟ್‌ಮೆಂಟುಗಳತ್ತ ಒಲವು ತೋರುತ್ತಾರೆ. ಆದರೆ ತನ್ನದೇ ಆದ ತುಂಡು ಜಾಗದಲ್ಲಿ ಪುಟ್ಟ ಗೂಡೊಂದನ್ನು ಕಟ್ಟಿಕೊಂಡು ಸುತ್ತಲೂ ಬೇಲಿ ಹಾಕಿ, ಒಳಗೆ ಸಣ್ಣ ಪುಟ್ಟ (ಜಾಗಕ್ಕೆ ತಕ್ಕಂತೆ) ಹೂ ಗಿಡಗಳನ್ನು ಬೆಳೆಸಿಕೊಳ್ಳುವ ಖಾಸಗೀತನದ ಸುಖಕ್ಕೆ ಬೇರಾವುದೂ ಸಾಟಿಯಾಗದು.

ಪ್ರತ್ಯೇಕ ಮನೆಯೊಂದನ್ನು ಕಟ್ಟುವುದು ಅಷ್ಟೊಂದು ಕಷ್ಟಕರ ಸಂಗತಿಯೇ? ಕಟ್ಟಿ ಮುಗಿಸುವಷ್ಟರಲ್ಲಿ ಮನುಷ್ಯ ಹೈರಾಣಾಗಿ ಹೋಗುವುದು ನಿಜವೇ? ಸರಿಯಾದ ಮಾಹಿತಿ, ಸ್ಪಷ್ಟ ಯೋಜನೆ, ಅದಕ್ಕೆ ತಕ್ಕ ಪೂರ್ವತಯಾರಿಯಿದ್ದರೆ ಮನೆಯ ನಿರ್ಮಾಣ ಅಂದುಕೊಂಡಷ್ಟು ಕಠಿಣ ಅಲ್ಲವೇ ಅಲ್ಲ. ಹಾಗಾದರೆ ಮನೆಯನ್ನು ಎಲ್ಲಿಂದ ಶುರುಮಾಡಿ ಹೇಗೆ ಮುಗಿಸುವುದು? ಬನ್ನಿ, ಅದರ ಸ್ಥೂಲ ಚಿತ್ರಣ ನೋಡೋಣ.

ಎಲ್ಲಕ್ಕಿಂತ ಮೊದಲು ಎದುರಾಗುವುದು – ಯಾವ ರೀತಿಯ ಮನೆ ಬೇಕು, ಎಲ್ಲಿ ಏನೇನು ಇರಬೇಕು ಅನ್ನುತ್ತ, ತಮಗಿಷ್ಟವಾಗುವ ಮನೆಯ ವಿನ್ಯಾಸ ಸಿದ್ಧಗೊಳಿಸುವ ಸವಾಲು. ಸಣ್ಣ ನಿವೇಶನವಾದರೆ, ವಾಸ್ತುಪ್ರಕಾರ ಮನೆ ನಿರ್ಮಿತವಾಗಬೇಕೆಂದಿದ್ದರೆ ವಿನ್ಯಾಸದಲ್ಲಿ ಆಯ್ಕೆಗಳು ಕಡಿಮೆಯೇ. ಆದರೂ ಇದ್ದುದರಲ್ಲಿಯೇ ವಿಭಿನ್ನವಾಗಿ, ಮನಸ್ಸಿಗೆ ಮೆಚ್ಚುಗೆಯಾಗುವ, ನಾಲ್ಕು ಜನ ನೋಡಿದವರು 'ಚೆನ್ನಾಗಿದೆ' ಎಂದು ಹೇಳಬಹುದಾದ ಮನೆ ಕಟ್ಟಬೇಕು ಎನ್ನುವುದು ಎಲ್ಲರ ಆಸೆ. ಮನೆಯಲ್ಲಿ ನಾಲ್ಕು ಜನರಿದ್ದರೆ ಪ್ರತಿಯೊಬ್ಬರದ್ದೂ ಒಂದೊಂದು ಆಲೋಚನೆ, ಅವಶ್ಯಕತೆ. ಪರಿಚಯದವರನ್ನು ಕೇಳಿದರೆ ಅವರದ್ದು ಮತ್ತೇನೋ ಸಲಹೆ. ಎಲ್ಲರನ್ನೂ ಎಷ್ಟು ಸಾಧ್ಯವೋ ಅಷ್ಟು ಮನ್ನಿಸಿ ಚಂದದ ಮನೆ ನಿರ್ಮಾಣವಾಗಬೇಕಾದುದು ಅನಿವಾರ್ಯ ತಾನೆ?

## ನವನವೀನ ನಮೂನೆ

ಮನೆಯ ಡಿಸೈನನ್ನು ಆರ್ಕಿಟೆಕ್ಟುಗಳಿಂದ ಮಾಡಿಸುವುದು ಮೊದಲ ವಿಧಾನ. ಅದು ಒಳ್ಳೆಯ ವಿಧಾನ ಕೂಡಾ. ಆರ್ಕಿಟೆಕ್ಟುಗಳ ಹತ್ತಿರ ಹೋದರೆ ಖರ್ಚು ಹೆಚ್ಚು, ಅವರ ಶುಲ್ಕವನ್ನೂ ಪ್ರತ್ಯೇಕವಾಗಿ ತೆರಬೇಕು ಎನ್ನುವುದು ಜನಸಾಮಾನ್ಯರ ನಂಬಿಕೆ. ಆದರೆ ಇದು ಎಲ್ಲ ಸಂದರ್ಭಗಳಲ್ಲೂ ಸತ್ಯವಲ್ಲ. ನಿಮ್ಮ ಅಭಿರುಚಿಗೆ ತಕ್ಕ, ನೋಡಲೂ ವಿಶಿಷ್ಟವೆನಿಸುವ ಮನೆಯನ್ನು ಡಿಸೈನ್ ಮಾಡಿಕೊಡುವುದಲ್ಲದೇ, ಹಣ ಉಳಿಸುವ ಅನೇಕ ಸಲಹೆ–ಸೂಚನೆಯನ್ನು ವಿನ್ಯಾಸಕಾರರು ನಿಮಗೆ ಒದಗಿಸಬಹುದು. ಅಲ್ಲದೇ, ಮನೆಯ ವೆಚ್ಚದ ಏರಿಳಿತಕ್ಕೆ ವಿನ್ಯಾಸ ಕೂಡಾ ಒಂದು ಕಾರಣ ಎಂಬುದು ತಿಳಿದಿರಲಿ.

ಇನ್ನೊಂದು ವಿಧಾನವೆಂದರೆ – ಮನೆಯ ವಿನ್ಯಾಸವನ್ನೂ ತಯಾರಿಸಿ, ಕಟ್ಟಿಸಿಯೂ ಕೊಡುವ 'ಡಿಸೈನ್ & ಬಿಲ್ಡ್' ಕಂಟ್ರಾಕ್ಟರುಗಳನ್ನು ಸಂಪರ್ಕಿಸುವುದು. ಇಲ್ಲಿ ನಿಮಗೆ ಪೂರಕ ಡಿಸೈನಿನೊಂದಿಗೆ ಹಲವು ವಿನ್ಯಾಸದ ಆಯ್ಕೆಗಳು ಅವುಗಳ ವೆಚ್ಚದೊಂದಿಗೆ ದೊರಕಬಲ್ಲವು. ಹಲವು ರೀತಿಯ ಚರ್ಚೆ, ವಿಚಾರ ವಿನಿಮಯದೊಂದಿಗೆ ವಿನ್ಯಾಸ ಹಾಗೂ ವೆಚ್ಚವನ್ನು ನಿರ್ಧರಿಸುವ



